quickmarketreports.com

Date :16-02-2016

# 2016 ಜನವರಿ ಅಂತ್ಯದ ತನಕ ಭಾರತದ ಈ ಸೀಸನ್‌ನ ಸಕ್ಕರೆ ಉತ್ಪಾದನೆ 142.33 ಲಕ್ಷ ಟನ್‌ಗಳು

ಜನವರಿ 31,2016 ರವರೆಗೆ ಭಾರತದಲ್ಲಿ ಒಟ್ಟು 510 ಮಿಲ್‌ಗಳು 142.33 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದೆಯೆಂದು ಹಾಗೂ ಹಿಂದಿನ ವರ್ಷ ಈ ಅವಧಿಯಲ್ಲಿ 517 ಮಿಲ್‌ಗಳಿಂದ ಉತ್ಪಾದಿಸಿದ 136.30 ಲಕ್ಷ ಟನ್‌ಗಳಿಂದ 4.57% ಶೇಕಡಾ ಅಧಿಕ ಉತ್ಪಾದಿಸಲಾಗಿದೆಯೆಂದು ಭಾರತೀಯ ಸಕ್ಕರೆ ಮಿಲ್‌ಗಳ ಸಂಘಟನೆ ಹೇಳಿದೆ. ಉತ್ತರಪ್ರದೇಶದಲ್ಲಿ 116 ಮಿಲ್‌ಗಳಿಂದ 36.15 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 117 ಮಿಲ್‌ಗಳಿಂದ 33.75 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತೆನ್ನಲಾಗಿದೆ.

ಮಹಾರಾಷ್ಟ್ರದಲ್ಲಿ ಈ ಸಕ್ಕರೆ ಸೀಜನ್‌ನ ಆರಂಭದಲ್ಲಿ 177 ಮಿಲ್‌ಗಳು ಕಾರ್ಯಾರಂಭ ಮಾಡಿದ್ದು ಜನವರಿ 31ಕ್ಕೆ ಅದರಲ್ಲಿ 13 ಮಿಲ್‌ಗಳು ಕಾರ್ಯ ಸ್ಥಗಿತಗೊಳಿಸಿದ್ದು ಒಟ್ಟು ಸಕ್ಕರೆ ಉತ್ಪಾದನೆ 54.42 ಲಕ್ಷ ಟನ್‌ಗಳಾಗಿದ್ದು ಹಿಂದಿನ ವರ್ಷ 176 ಮಿಲ್‌ಗಳಿಂದ 54.37 ಲಕ್ಷ ಟನ್ ಉತ್ಪಾದಿಸಲಾಗಿತ್ತೆನ್ನಲಾಗಿದೆ.

ಕರ್ನಾಟಕದಲ್ಲಿ 64 ಮಿಲ್‌ಗಳು 26.89 ಲಕ್ಷ ಟನ್ ಸಕ್ಕರೆ ಈ ಸೀಸನ್ ಜನವರಿ ಅಂತ್ಯದವರೆಗೆ ಉತ್ಪಾದಿಸಿದ್ದು ಹಿಂದಿನ ಸೀಜನ್‌ನಲ್ಲಿ 63 ಮಿಲ್‌ಗಳಿಂದ 23.13 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತೆನ್ನಲಾಗಿದೆ.

ತಮಿಳುನಾಡಿನಲ್ಲಿ 37 ಮಿಲ್‌ಗಳಿಂದ 2.30 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದ್ದು ಹಿಂದಿನ ಸೀಸನ್‌ನಲ್ಲಿ 39 ಮಿಲ್‌ಗಳು 2.11 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆಯೆನ್ನಲಾಗಿದೆ. ಆಂಧ್ರಪ್ರದೇಶ, ತೆಲಂಗಾಣಗಳಲ್ಲಿ 26 ಮಿಲ್‌ಗಳಿಂದ ಈ ವರ್ಷ 4.26 ಲಕ್ಷ ಟನ್ ಉತ್ಪಾದಿಸಲಾಗಿದ್ದು ಹಿಂದಿನ ವರ್ಷ ಈ ಅವಧಿಯಲ್ಲಿ 4.92 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತೆನ್ನಲಾಗಿದೆ.

ಬಿಹಾರ, ಉತ್ತರಾಖಂಡ, ಪಂಜಾಬ್, ಹರ್‍ಯಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡ್‌ಗಳಲ್ಲಿ ಜನವರಿ 31,2016ರ ತನಕ ಸಕ್ಕರೆ ಉತ್ಪಾದನೆ ಕ್ರಮವಾಗಿ 3.05 ಲಕ್ಷ ಟನ್, 1.43 ಲಕ್ಷ ಟನ್, 2.60 ಲಕ್ಷ ಟನ್ ಮತ್ತು 1.90 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದೆಯೆಂದು ಸಕ್ಕರೆ ಮಿಲ್‌ಗಳ ಸಂಘಟನೆ ಪ್ರಕಟನೆ ಮಾಡಿದೆ.